ತಾರೀಖು 7ನೆ ಮಾರ್ಚಿ 1907.

ನಂ. ಜೆ. 5479—ಜೆ. ಎಂ. 255-06-4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಈ ಇಸ್ತಿಹಾರ್ನಾಮೆಯಿಂದ ಪ್ರಸಿದ್ಧಪಡಿಸುವುದೇನಂದರೆ, ಇಂಡಿಯಾ ದೇಶದ ಕೂಲಿಯವರಿಗೆ ನ್ಯೂಕಾಲಿಡೋನಿಯಾದಲ್ಲಿ ಕೆಲಸ ದೊರೆಯುವ ಸಂಭವವಿರುವುದಿಲ್ಲವೆಂದೂ ಮತ್ತು ಸದರಿ ಕೂಲಿಯವರು ನಿರ್ಗತಿಕರಾದ ಸಂದರ್ಭದಲ್ಲಿ ನ್ಯೂಕಾಲಿಡೋನಿಯಾ ವಸತಿಯ ಸರ್ಕಾರದವರು ಅವರಿಗೆ ಸಹಾಯ ಮಾಡುವಹಾಗಿಲ್ಲವೆಂದೂ ಶ್ರೀಮದಿಂಡಿಯಾ ಚಕ್ರವರ್ತಿಯವರ ಇಂಡಿಯಾ ದೇಶದ ಸ್ಟೇಟ್ ಸೆಕ್ರಿಟರಿಯವರು ಇಂಡಿಯಾ ಸರ್ಕಾರದವರ ಅವಧಾನಕ್ಕೆ ತಂದಿರುತ್ತಾರೆ.

ತಾರೀಖು 13ನೆ ಮಾರ್ಚಿ 1907.

ನಂ. ಜೆ. 2803—ಕೋ. 216-06-2, ವಿ॥ ಬಿ. ಟ. ಸೀತಾರಾಮಯ್ಯನವರು 22 ದಿವಸಗಳ ಟ್ರಾವಲೀವ್ ರಜಾ ಮೇಲೆ ಇರುವ ಕಾಲದಲ್ಲಿ ಮಂಡ್ಯ ತಾಲ್ಲೂಕಿನ ಚಾರ್ಜಿನಲ್ಲಿ ಇಡಲ್ಪಟ್ಟಿರುವ ಸದರಿ ತಾಲ್ಲೂಕಿನ ಶಿರಸ್ತೆದಾರ್ ಎ. ನಾರಣ್ಯಯ್ಯಂಗಾರ್ರಿಗೆ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೂರನೆ ತರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು, ಅವರು ಸದರಿ ತಾಲ್ಲೂಕಿನ ಚಾರ್ಜಿನಲ್ಲಿರುವ ತನಕ ನಡೆಸತಕ್ಕ ಬಗ್ಗೆ, ಕೊಟ್ಟಿದೆ.

ತಾರೀಖು 25ನೆ ಜನವರಿ 1907.

ನಂ. ರೆ. 7790—ಫಾ. 163-06—3, ಸನ್ 1901 ನೆ ಇಸವಿ 11ನೆ ನಂಬರು ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ಮೇಲೆ ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟು ಆಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತದೆ ಎಂಬುದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಪಟ್ಟಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸರ್ವೆ ನಂಬರುಗಳು ಸೇರಿದ ಗ್ರಾಮಗಳ ಹೆಸರು.	ಸ್ಥಳ ಮತ್ತು ಚಕ್ಕು ಬಂದಿ.
ಕಡೂರು.	ಮೂಡಿಗೆರೆ	ದಕ್ಷಿಣ ಭದ್ರಾ	23,546 ಎಕರೆಗಳು 31 ಗುಂಟೆಗಳು ಅಥವಾ 36.79 ಚದರ ಮೈಲುಗಳು.

ಸ್ಥಳ :—ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕಿನಲ್ಲಿ ಉತ್ತರಕ್ಕೆ ಭದ್ರಾನದಿ ಪೂರ್ವಕ್ಕೆ ಕಳಸ ದಕ್ಷಿಣಕ್ಕು ಮತ್ತು ಪಶ್ಚಿಮಕ್ಕು ದಕ್ಷಿಣ ಕನಡ ಜಿಲ್ಲಾ ಸರಹದ್ದು ಈ ಬಳಿಗೆ ಇರುವ ಪಶ್ಚಿಮ ಘಟ್ಟದ ಗುಡ್ಡದ ಪ್ರದೇಶಗಳು :—

ಉತ್ತರಕ್ಕೆ : ಸಂಸೆ ಗ್ರಾಮದ ಸರ್ವೆ ನಂಬರು 33ರ ಪಶ್ಚಿಮ ಎಲ್ಲೆಯಲ್ಲಿ ಕಳಸದಿಂದ ದಕ್ಷಿಣ ಕನಡ ಜಿಲ್ಲೆಗೆ ಹೋಗುವ ಕಾಲು ದಾರಿಯು ದಕ್ಷಿಣ ಕನ್ನಡ ಡಿಸ್ಟ್ರಿಕ್ಟಿನ ಎಲ್ಲೆಯನ್ನು ದಾಟುವ ಸ್ಥಳದಿಂದ, ಎಲ್ಲೆಯ ರೇಖೆಯು ಹೊರಟು ಸದರಿ ಕಾಲುದಾರಿಯನ್ನನುಸರಿಸಿ ಸದರಿ ಸರ್ವೆ 33ನೆ ನಂಬರಿನೊಳಗೆ ಭದ್ರಾನದಿ ಸಿಕ್ಕುವ ವರೆಗೆ ಈಶಾನ್ಯಮುಖವಾಗಿ ಹೋಗುತ್ತದೆ; ಅನಂತರ ಸಂಸೆ ಗ್ರಾಮದ 79ನೆ ಸರ್ವೆ ನಂಬರಿನ ನೈರುತ್ಯ ಸರಹದ್ದನ್ನು ಸೇರುವ ವರೆಗೆ ಭದ್ರಾನದಿಯ ಬಲಗಡೆ ದಡದವೇಲೆ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 79–80 ಮತ್ತು 81ರ ದಕ್ಷಿಣ ಸರಹದ್ದಿನವೇಲೆ ಪೂರ್ವಮುಖನಾಗಿ ಹೋಗುತ್ತದೆ; ಅನಂತರ ಅದೇಗ್ರಾಮದ ಸರ್ವೆ ನಂಬರು 83ರ ವಾಯವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ದಕ್ಷಿಣಮುಖನಾಗಿ ಹಳ್ಳದಪಕ್ಕದಲ್ಲಿ ಹೋಗುತ್ತದೆ. ಅನಂತರ ಅದೇ ನಂಬರಿನ ನೈರುತ್ಯ ದಿಕ್ಕಿನಲ್ಲು; ಅನಂತರ ಅದೇ ನಂಬರಿನ ಪಶ್ಚಿಮ ಸರಹದ್ದಿನವೇಲು; ಅನಂತರ ಬಂದು ಹಳ್ಳವನ್ನು ಮುಟ್ಟುವ ವರೆಗೂ ದಕ್ಷಿಣ ಸರಹದ್ದಿನಲ್ಲಿ ಹೋಗುತ್ತದೆ; ಅನಂತರ ಹಳ್ಳವನ್ನು ದಾಟಿ ಅದರ ಪಕ್ಕ ಬಲ್ಲೆ ಅದೇ ಗ್ರಾಮದ ಸರ್ವೆ ನಂಬರು 82ರ ದಕ್ಷಿಣ ಮೂಲೆಯನ್ನು ಮುಟ್ಟುವ ವರೆಗೂ ಉತ್ತರಮುಖನಾಗಿ ಹೋಗುತ್ತದೆ. ಅನಂತರ ಭದ್ರಾನದಿ ದಡ ಸಿಕ್ಕುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 82ರ ಪೂರ್ವ ಸರಹದ್ದಿನ ಮೇಲೆ ಈಶಾನ್ಯ ಮುಖನಾಗಿ ಹೋಗುತ್ತದೆ; ಅನಂತರ ಆ ಸ್ಥಳದಿಂದ ತುಂಗಾನದಿಯ ಬಲಗಡೆ ದಡವನ್ನು ಅನುಸರಿಸಿ ಉತ್ತರ ಮತ್ತು ದಕ್ಷಿಣಮುಖನಾಗಿ ಅದೇ ಗ್ರಾಮದ ಸರ್ವೆ ನಂಬರು 90ರ ಪಶ್ಚಿಮ ಸರಹದ್ದು ಮೂಲೆಯನ್ನು ಮುಟ್ಟುವ ವರೆಗೂ ಹೋಗುತ್ತದೆ; ಅನಂತರ ಅದೇಗ್ರಾಮದ ಸರ್ವೆ ನಂಬರು 90 ಮತ್ತು 92ರ ದಕ್ಷಿಣ ಮತ್ತು ಪಶ್ಚಿಮ ಸರಹದ್ದುಗಳ ಮೇಲೆ ದಕ್ಷಿಣಮುಖನಾಗಿ ಸರ್ವೆ ನಂಬರು 92ರ ದಕ್ಷಿಣ ಮೂಲೆಗೆ ಹೋಗುತ್ತದೆ; ಅನಂತರ ಭದ್ರಾನದಿಯ ದಡವನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 92 ಮತ್ತು 94ರ ದಕ್ಷಿಣ ಸರಹದ್ದುಗಳ ಮೇಲೆ ಈಶಾನ್ಯಮುಖನಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 95ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ನದಿಯ ಬಲಭಾಗವನ್ನನುಸರಿಸಿ ಪೂರ್ವ ಮುಖನಾಗಿಯೂ, ಅನಂತರ ಅದೇ ನದಿಯನ್ನು ಸೇರುವ ವರೆಗೆ ಸರ್ವೆ ನಂಬರು 95ರ ಪಶ್ಚಿಮ ದಕ್ಷಿಣ-ಉತ್ತರ ಸರಹದ್ದಿನ ಮೇಲೆ ಆಗ್ನೇಯ ಮತ್ತು ಉತ್ತರ ಮುಖನಾಗಿಯೂ ಹೋಗುತ್ತದೆ; ಅನಂತರ ಸರ್ವೆ ನಂಬರು 112ರ ವಾಯವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಸದರಿ ನದಿಯ ಬಲದಡವನ್ನು ಅನುಸರಿಸಿ ಪೂರ್ವ ಮುಖನಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 112ರ

ಪಶ್ಚಿಮ, ದಕ್ಷಿಣ ಮತ್ತು ನೈರುತ್ಯ ಸರಹದ್ದಿನವೇಲೆ ದಕ್ಷಿಣ, ಪೂರ್ವ ಮತ್ತು ದಕ್ಷಿಣ ಮುಖನಾಗಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 113 ಮತ್ತು 111ರ ದಕ್ಷಿಣ ಮತ್ತು ಪೂರ್ವ ಸರಹದ್ದಿನವೇಲೆ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ 110ರ ಪಶ್ಚಿಮ ಸರಹದ್ದಿನ ಮೂಲೆಯನ್ನು ಸೇರುವ ವರೆಗೆ ನದಿಯ ಬಲಭಾಗವನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 110—109 ಮತ್ತು 108ರ ಪೂರ್ವ ಮತ್ತು ದಕ್ಷಿಣ ಸರಹದ್ದಿನ ಮೇಲು; ಅನಂತರ ಸರ್ವೆ ನಂಬರು 106ರ ದಕ್ಷಿಣ ಮೂಲೆಯನ್ನು ಸೇರುವವರೆಗೆ ಸರ್ವೆ ನಂಬರು 107 ಮತ್ತು 106ರ ಪಶ್ಚಿಮ ಸರಹದ್ದಿನ ವೇಲೆ ದಕ್ಷಿಣ ಮುಖನಾಗಿಯೂ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 106-105 ಮತ್ತು 104ರ ಪಶ್ಚಿಮ ಸರಹದ್ದುಗಳನ್ನು ಅನುಸರಿಸಿ ಈಶಾನ್ಯಮುಖನಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 103ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ನದಿಯ ಬಲಕಡೆ ದಡವನ್ನು ಅನುಸರಿಸಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 103ರ ದಕ್ಷಿಣ ಮತ್ತು ಪೂರ್ವ ಸರಹದ್ದನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 157ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಸದರಿ ನದಿಯ ಬಲಕಡೆ ದಡವನ್ನು ಅನುಸರಿಸಿ ಉತ್ತರಮುಖನಾಗಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 157ರ ಬಳಿಗೆ ಪೂರ್ವಮುಖನಾಗಿ ಎರಡು ಫರಲಾಂಗಿನಷ್ಟು ದೂರ ಹೋಗುತ್ತದೆ.

ಪೂರ್ವಕ್ಕೆ :—ಅನಂತರ ಅದೇಗ್ರಾಮದ ಸರ್ವೆ ನಂಬರು 158ರ ವಾಯವ್ಯ ಮೂಲೆಯಲ್ಲಿರುವ ಬಂದು ಹಳ್ಳವನ್ನು ಸೇರುವ ವರೆಗೆ ಸರ್ವೆ ನಂಬರು 157ರ ಬಳಿಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 155ರ ಉತ್ತರ ಮೂಲೆಯನ್ನು ಸೇರುವ ವರೆಗೆ ವೇಲೆ ಕಂಡ ಹಳ್ಳವನ್ನು ಅನುಸರಿಸಿ ನಾಲ್ಕು ಫರಲಾಂಗಿನಷ್ಟು ದೂರ ದಕ್ಷಿಣಮುಖನಾಗಿ ಹೋಗುತ್ತದೆ; ಅನಂತರ ದಕ್ಷಿಣ ಮುಖನಾಗಿ ತಿರಿಗಿ ಸರ್ವೆ ನಂಬರು 155ರ ಪಶ್ಚಿಮ ಸರಹದ್ದಿನಲ್ಲಿ ಹೋಗುತ್ತದೆ; ಅನಂತರ ಸರ್ವೆ ನಂಬರು 156ರ ಉತ್ತರ ಸರಹದ್ದಿನವೇಲೆ ಪಶ್ಚಿಮ ಮುಖನಾಗಿಯೂ; ಅನಂತರ ಅದೇ ನಂಬರಿನ ಪಶ್ಚಿಮ ಸರಹದ್ದಿನವೇಲು, ಅನಂತರ ಸರ್ವೆ ನಂಬರು 194ರ ಬಳಿಗೆ ನಾಲ್ಕು ಫರಲಾಂಗಿನಷ್ಟು ದೂರ ದಕ್ಷಿಣ ಮತ್ತು ನೈರುತ್ಯ ಮುಖನಾಗಿಯೂ, ಆನಂತರ ಸರ್ವೆ ನಂಬರು 127ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 147ರ ಬಳಿಗೆ ಹತ್ತು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಬಂದು ಹಳ್ಳವನ್ನು ಸೇರುವ ವರೆಗೆ ಸರ್ವೆ ನಂಬರು 147ರ ಬಳಿಗೆ ಎರಡು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ; ಅನಂತರ ಹಳ್ಳವನ್ನನುಸರಿಸಿ ಸರ್ವೆ ನಂಬರು 117ರ ಬಳಿಗೆ ನಾಲ್ಕು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ; ಅನಂತರ ಹಳ್ಳವನ್ನು ದಾಟಿ ಸರ್ವೆ ನಂಬರು 117ರ ಬಳಿಗೆ ಬಂದು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸುಮಾರು ಮೂರು ಫರಲಾಂಗುಗಳ ದೂರ ಪೂರ್ವ ಮುಖನಾಗಿಯೂ ಮತ್ತೊಂದು ಹಳ್ಳವನ್ನು ಸೇರುವ ವರೆಗೆ ಮೂರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ಎರಡನೆ ಹಳ್ಳವನ್ನು ದಾಟಿ ಸಂಸೆಯಿಂದ ಕುದುರೆ ಮುಖಕ್ಕೆ ಹೋಗುವ ಕಾಲುದಾರಿ ಸಿಕ್ಕುವ ವರೆಗೆ ವೇಲೆ ಕಂಡ ಸರ್ವೆ ನಂಬರಿನ ಬಳಿಗೆ ಎರಡು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಸರ್ವೆ ನಂಬರು 19ರ ಬಳಿಗೆ ಎರಡುವರೆ ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ಅದೇ ನಂಬರಿನೊಳಗೆ ಎರಡೂವರೆ ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದು ಸೇರುವವರೆಗೆ ವೇಲೆ ಕಂಡ ಸರ್ವೆ ನಂಬರಿನೊಳಗೆ ಆರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ದಕ್ಷಿಣ ಕನ್ನಡ ಜಿಲ್ಲ ಸರಹದ್ದಿನವೇಲೆ ಆರುಫರಲಾಂಗಿನಷ್ಟು ದೂರ ನೆಟ್ಟಗೆ ದಕ್ಷಿಣ ಮುಖನಾಗಿ ಹೋಗುತ್ತದೆ.

ದಕ್ಷಿಣಕ್ಕೆ :—ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದು.

ಪಶ್ಚಿಮಕ್ಕೆ :—ಸದರಿ ಲೈ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನವೇಲೆ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ವೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ|| ಎಂ. ಶಾಮರಾವ್, ಎಂ. ಎ., ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜವಿನಿನಲ್ಲಿ ಅಥವಾ ಅದರ ವೇಲೆ ಅಥವಾ ಅಂಥಾ ಜಂಗಲಿ ಜವಿನಿನ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಿಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು, ಅವುಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ವೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡಸುವುದಕ್ಕೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ರಾಡಲೂ, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಗವರ್ನ್‌ಮೆಂಟ್ ತರಫಿ ಸಹಾಯ ಮಾಡುವುದಕ್ಕೆ ಹಾಜರಾಗುವುದಕ್ಕಾಗಿ ಮೊಕರರ್ರಾಡಲು, ಮೈಸೂರು ಶ್ರೀಮಂ ಮಹಾರಾಜರವರ ಸರ್ಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

3. ವೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮಂ ಮಹಾರಾಜರವರ ಸರಕಾರದವರು, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ವೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫಿಸರಾಗಿ ಮೊಕರರ್ರಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.